ಆರ್ ಡಬ್ಲ್ಯೂ : 1

ದಿನಾಂಕ ಃ 12.11.2021 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಎ ಕೆ ಕೆ ವಕೀಲರಿಂದ,

ಈ ಅರ್ಜಿಯನ್ನು ತೇಜಮ್ಮ ಮತ್ತು ಅವರ ಮಕ್ಕಳು ಹಾಕಿರುತ್ತಾರೆ. ಅಸಲು ದಾವೆ 264/2006 ಸಲ್ಲಿಸುವ ಕಾಲಕ್ಕೆ ನನ್ನ ತಂದೆ ಜೀವಂತ ಇದ್ದರು ಎಂದರೆ ಸರಿ. ನನ್ನ ತಾಯಿಯ ಹೆಸರು ಬಸಮ್ಮ. ನನ್ನ ತಾಯಿಯ ತಂದೆಯ ಹೆಸರು ದೊಡ್ಡ ಬಸವನ ಗೌಡ. ಸರ್ವೆ ನಂ.260 ರ ಕ್ಷೇತ್ರ 11 ಎಕರೆ ಚಿಲ್ಲರೆ ಇರುತ್ತದೆ. ದಾವಾ ಆಸ್ತಿಯೂ ಮೂಲತಃ ನನ್ನ ತಾಯಿಯ ತಂದೆಗೆ ಸೇರಿದ ಆಸ್ತಿ. ನನ್ನ ತಾಯಿಯ ತಂದೆ ದೊಡ್ಡ ಬಸವನ ಗೌಡ ಆಸ್ತಿ ಸರ್ವೆ ನಂ.260 ಕ್ಷೇತ್ರ 11 ಎಕರೆ 31 ಸೆಂಟ್ಸ್ ಪೈಕಿ ಎರಡು ಎಕರೆ ಆಸ್ತಿಯನ್ನು ದಿನಾಂಕ 28.04.1972 ರಂದು ದಾನ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಡ್ಡ ಬಸವನ ಗೌಡ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಎನ್. ಹರೀಶ್ವರಪ್ಪ ಎಂದರೆ ಸರಿ. ಎನ್ ಅಂದರೆ ಆಂಧ್ರಪ್ರದೇಶದ ನಿಟ್ಟೂರೊಟ್ಟಿ ಎನ್ನುವ ಗ್ರಾಮ ಎಂದರೆ ಸರಿ. ನನ್ನ ತಂದೆ ನಿಟ್ಟೂರೊಟ್ಟಿ ದಲ್ಲಿ ಹುಟ್ಟಿ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬ ನಿಟ್ಟೂರೊಟ್ಟಿ ಕುಟುಂಬ ಎಂದರೆ ಸರಿ. ಆದರೆ ನಾನು ಕೊಂಚಗೇರಿ ಗ್ರಾಮದಲ್ಲಿ ಬೆಳೆದಿರುತ್ತೇನೆ. ದೊಡ್ಡ ಬಸವನ ಗೌಡ ರವರ ಕುಟುಂಬದ ಹೆಸರು ಶಿವನಗೌಡರ ಕುಟುಂಬ ಎಂದರೆ ಸರಿ. ದಿನಾಂಕ 28.04.1972 ರ ದಾನ ಪತ್ರದ ಮೂಲಕ ನನ್ನ ತಾಯಿಯ ಹೆಸರಿಗೆ ಪಹಣಿ ಬದಲಾವಣೆಯಾಗಿರುತ್ತದೆ. ಯಾವ ಇಸ್ವಿಯಲ್ಲಿ ಪಹಣಿ ಬದಲಾವಣೆಯಾಗಿರುತ್ತದೆ ಎಂದು ಗೊತ್ತಿಲ್ಲ. ನನ್ನ ತಾಯಿ ಆದಿ ಬಸಮ್ಮ 1991 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಹರೀಶ್ವರಪ್ಪ 2014 ನೇ ಇಸ್ವಿಯಲ್ಲಿ ತೀರಿಕೊಂಡಿರುತ್ತಾರೆ. ಆಸ್ತಿ ಸರ್ವೆ ನಂ.260 ರ ಪೈಕಿ ಎರಡು ಎಕರೆ ಆಸ್ತಿಯೂ ನನ್ನ ತಂದೆಯ ಹೆಸರಿಗೆ ಪಟ್ಟ ಬದಲಾವಣೆ ಯಾವ ಇಸ್ವಿಯಲ್ಲಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ತಂದೆ ಜೀವಂತ ಇರುವ ತನಕ ಆಸ್ತಿ ಸರ್ವೆ ನಂ.260 ನನ್ನ ತಾಯಿಯ ತಂದೆಯ ಹೆಸರಿನಲ್ಲೆ ಇತ್ತು ಎಂದರೆ ಸಾಕ್ಷಿಯೂ ಅವಾಗ ನಮ್ಮ ಸಂಬಂಧ ಇತ್ತು ಆದ ಕಾರಣ ಪಹಣಿ ಬದಲಾವಣೆ ಮಾಡಿಸದೆ ಇರಬಹುದು ಎಂದು ಹೇಳುತ್ತಾರೆ. ನನ್ನ ತಾಯಿಯ ತಂದೆ ಯಾವುದೇ ದಾನ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ

ಮತ್ತು ಸದರಿ ಎರಡು ಎಕರೆಯ ಆಸ್ತಿಯ ಸ್ವಾಧೀನವನ್ನು ನಮಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಎ.ಸಿ ಬಳ್ಳಾರಿಯ ಕಛೇರಿಯಲ್ಲಿ ಮೇಲ್ಮನವಿ ನಂ.73/2003-04 ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣವೂ ನನ್ನ ತಂದೆಯ ಪರವಾಗಿ ಆದೇಶವಾಗಿದ್ದು ಅದನ್ನು ಪ್ರಶ್ನಿಸಿ ಅರ್ಜಿದಾರರು ಡಿ.ಸಿ ಕಛೇರಿಯಲ್ಲಿ ಮೇಲ್ಮನವಿ ಸಂಖ್ಯೆ 45/2007 ನ್ನು ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ನನ್ನ ವಿರುದ್ಧ ಆದೇಶವಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಮೇಲ್ಮನವಿ ಅರ್ಜಿದಾರರ ಪರ ಆದೇಶವಾಗಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗಾಗಲಿ ನನ್ನ ಅಕ್ಕ-ತಂಗಿಯಂದಿರಿಗಾಗಲಿ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 28.04.1972 ರ ದಾನ ಪತ್ರವನ್ನು ನನ್ನ ತಾತ ಬರೆದುಕೊಟ್ಟಿರುವುದಿಲ್ಲ ಆದ ಕಾರಣ ನನ್ನ ತಂದೆ ತಾಯಿಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೂಲತಃ ನನ್ನ ತಾಯಿಯ ತಂದೆಯ ತಂದೆಗೆ ಅಂದರೆ ಮುತ್ತಾತನಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ಸಾಕ್ಷಿಯೂ ಮುಂದುವರೆದು ನನಗೆ ಇಬ್ಬರು ತಾತಂದಿರು ಇದ್ದರು, ಚಿಕ್ಕ ತಾತನಿಂದ ಆಸ್ತಿಯನ್ನು ಸರ್ವೆ ನಂ.260 ಆಸ್ತಿಯನ್ನು ನನ್ನ ದೊಡ್ಡ ತಾತ ಖರೀದಿ ತೆಗೆದುಕೊಂಡಿದ್ದರು ಎಂದು ಹೇಳುತ್ತಾರೆ. ದೊಡ್ಡ ತಾತನ ಹೆಸರು ದೊಡ್ಡ ಬಸವನ ಗೌಡ ಮತ್ತು ಸಣ್ಣ ತಾತನ ಹೆಸರು ಮುದ್ದನ ಗೌಡ. ನನ್ನ ದೊಡ್ಡ ತಾತ ಆಸ್ತಿ ಖರೀದಿ ಮಾಡಿದ್ದಾರೆ ಎಂದು ತೋರಿಸಲು ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದೊಡ್ಡ ಬಸವನ ಗೌಡ ಸರ್ವೆ ನಂ.260 ರಲ್ಲಿ ಯಾವುದೇ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 28.04.1972 ರ ದಾನ ಪತ್ರದ ಆಧಾರದಲ್ಲಿ ನನ್ನ ತಂದೆ -ತಾಯಿ ಸಿರುಗುಪ್ಪ ನ್ಯಾಯಾಲಯದಲ್ಲಿ ಅಸಲು ದಾವೆ 180/2011 ನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಆದ ತೀರ್ಪನ್ನು ಪ್ರಶ್ನಿಸಿ ಅರ್ಜಿದಾರರು ಆರ್.ಎ.ನಂ.44/2017 ನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಇವಾಗ ಸಾಕ್ಷಿಗೆ ಅಸಲು ದಾವೆ 180/2011 ರಲ್ಲಿ ಮುಖ್ಯ ಸಾಕ್ಷಿ ವಿಚಾರಣೆ ಮತ್ತು ಪಾಟೀ ಸವಾಲಿನ ದೃಢಿಕೃತ ನಕಲನ್ನು ತೋರಿಸಿದ್ದು ಸಾಕ್ಷಿಯೂ ಅದರಲ್ಲಿರುವ ಸಹಿಯನ್ನು ನೋಡಿ ಒಪ್ಪಿ ನಿಪಿ-1 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಆಸ್ತಿ ಸರ್ವೆ ನಂ.260 ನನ್ನ ಮುತ್ತಾನ ಆಸ್ತಿ ಎಂದು ಹೇಳಿರುತ್ತೇನೆ

ಎಂದರೆ ಸಾಕ್ಷಿಯೂ ನಾನು ಕುಟುಂಬದ ಆಸ್ತಿ ಎಂದು ಹೇಳಿರುತ್ತೇನೆ ಎಂದು ಹೇಳುತ್ತಾರೆ. ನನ್ನ ತಂದೆ-ತಾಯಿಗೆ, ನನಗೆ ಹಾಗೂ ನನ್ನ ಅಕ್ಕ-ತಂಗಿಯನದಿರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ತಂಗಿ ಹಂಪಮ್ಮ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ. ನನ್ನ ತಾಯಿಯ ತಂಗಿ ಮತ್ತು ನಾವೆಲ್ಲರೂ ಶಾಮಿಲಾಗಿ ಅಸಲು ದಾವೆ 42/2018 ನ್ನು ಸುಳ್ಳಾಗಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.